# ಅಬಕಾರಿ ಸಬ್‌ಇನ್ಸ್‌ಪೆಕ್ಟರ್ (ESI) ನೇಮಕಾತಿ ಪರೀಕ್ಷೆ–2013

**ಸಮಯ: 90 ನಿಮಿಷ** ವಿಷಯ : ಸಾಮಾನ್ಯ ಅಧ್ಯಯನ **F** ದಿನಾಂಕ : 09–06–2013 ಗರಿಷ್ಠ ಅಂಕಗಳು : 150

---

**1.** ಒಬ್ಬ ಸ್ವತಂತ್ರ ರಾಜನೆಂದು ಶಿವಾಜಿಗೆ ಕಿರೀಟಧಾರಣೆ ಎಲ್ಲಿ ನಡೆಯಿತು.
1) ಪುಣೆ 2) ಸೂರತ್ 3) ರಾಯಗಢ 4) ಸಿಂಹಗಢ

**2.** ಕೆಳಗಿನವುಗಳನ್ನು ಸರಿಯಾಗಿ ಹೊಂದಿಸಿ.

| ಎ | | ಬಿ |
|---|---|---|
| ಎ) 312 ನೇ ಅನುಚ್ಛೇದ | 1. | ಸರ್ವೋಚ್ಚ ನ್ಯಾಯಾಲಯದ ಮೂಲ ಅಧಿಕಾರ ವ್ಯಾಪ್ತಿ. |
| ಬಿ) 368ನೇ ಅನುಚ್ಛೇದ | 2. | ಹಣಕಾಸು ಆಯೋಗದ ಸ್ಥಾಪನೆ |
| ಸಿ) 131ನೇ ಅನುಚ್ಛೇದ | 3. | ಅಖಿಲ ಭಾರತ ಸೇವೆಗಳು |
| ಡಿ) 280ನೇ ಅನುಚ್ಛೇದ | 4. | ಸಂವಿಧಾನದ ತಿದ್ದುಪಡಿ |

**ಕೋಡ್:**

| | ಎ | ಬಿ | ಸಿ | ಡಿ |
|---|---|---|---|---|
| 1) | 3 | 1 | 2 | 4 |
| 2) | 3 | 2 | 1 | 4 |
| 3) | 3 | 4 | 1 | 2 |
| 4) | 2 | 3 | 4 | 1 |

**3.** ಸೂರತ್‌ನಲ್ಲಿ ಕಾರ್ಖಾನೆಯನ್ನು ಆರಂಭಿಸಲು ಬ್ರಿಟಿಷರ ಪರವಾಗಿ ಆಜ್ಞಾಪನೆ ಹೊರಡಿಸಿದ ಮೊದಲ ಮೊಘಲ್ ಚಕ್ರವರ್ತಿ.
1) ಔರಂಗ್ ಜೇಬ್ 2) ಜಹಂಗೀರ್ 3) ಶಹಜಹಾನ್ 4) ಅಕ್ಬರ್

**4.** ರಾಮ ಮತ್ತು ರಹೀಂ ಇವೆರಡೂ ಒಂದೇ ದೈವದ ಬೇರೆಬೇರೆ ಹೆಸರುಗಳು ಎಂದು ಹೇಳಿದವರು.
1) ಕಬೀರ್ 2) ರಾಮದಾಸ್ 3) ಚೈತನ್ಯ 4) ರಮಾನಂದ

**5.** ಕಪ್ಪು ರಂಧ್ರದ ದುರಂತವು ಕೆಳಕಂಡ ಕದನಕ್ಕೆ ಮುಖ್ಯ ಕಾರಣ.
1) ಬಕ್ಸಾರ್ 2) ಪ್ಲಾಸಿ 3) ವಾಂಡಿವಾಷ್ 4) ಹಳದಿ ಘಾಟ್

**6.** ಬಾದಾಮಿ ಚಾಲುಕ್ಯರು ಅಭಿವೃದ್ಧಿ ಪಡಿಸಿದ ವಾಸ್ತು ಶಿಲ್ಪದ ಶೈಲಿ ಯಾವುದು ?
1) ದ್ರಾವಿಡ 2) ವೇಸರ 3) ನಾಗರ 4) ಗೋಪುರಂ

**7.** ಈ ಕೆಳಕಂಡ ಪ್ರದೇಶದಲ್ಲಿರುವ ಶಾಸನಗಳು ಚೋಳರ ಕಾಲದಲ್ಲಿದ್ದಂತಹ ಗ್ರಾಮಾಡಳಿತದ ವಿವರಗಳನ್ನು ಒದಗಿಸುತ್ತವೆ.
1) ತಂಜಾವೂರ್ 2) ಉರ್‍ಯೈಯೂರ್ 3) ಕಾಂಚೀಪುರಂ 4) ಉತ್ತರ ಮೇರೂರ್

**8.** ಮೈಸೂರು ಚಲೋ ಚಳುವಳಿ ನಡೆದ ವರ್ಷ
1) 1945 2) 1946 3) 1947 4) 1949

**9.** ಹಿಂದೂಸ್ತಾನ್ ಸೇವಾದಳವನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಿದವರು
1) ಕಡಪ ರಾಘವೇಂದ್ರ ರಾವ್ 2) ಎಚ್.ಆರ್. ದೇಶಪಾಂಡೆ
3) ಗೋವಿಂದರಾವ್ ಯಾಲಗಿ 4) ಡಾ॥ಎನ್.ಎಸ್.ಹರ್ಡೀಕರ್

**10.** ಪಟ್ಟಿ I ಮತ್ತು ಪಟ್ಟಿ II ನ್ನು ಸರಿ ಹೊಂದಿಸಿ ಕೆಳಕಂಡ ಸಂಕೇತಗಳನ್ನು ಬಳಸಿ ಸರಿ ಉತ್ತರ ತಿಳಿಸಿ.

| ಪಟ್ಟಿ I | | ಪಟ್ಟಿ II |
|---|---|---|
| A) ಅಹ್ಮದ್ ನಗರ | 1. | ನಿಜಾಂ ಶಾಹಿ |
| B) ಗೋಲ್ಕೊಂಡ | 2. | ಕುತಾಬ್ ಶಾಹಿ |
| C) ಬೀಜಾಪುರ | 3. | ಆದಿಲ್ ಶಾಹಿ |
| D) ಬೀದರ್ | 4. | ಬರೀದ್ ಶಾಹಿ |

**ಕೋಡ್:**

| | A | B | C | D |
|---|---|---|---|---|
| 1) | 2 | 1 | 3 | 4 |
| 2) | 4 | 1 | 3 | 2 |
| 3) | 1 | 2 | 3 | 4 |
| 4) | 2 | 4 | 1 | 3 |

**11.** ಸಂವಿಧಾನ ಸಭೆಯ ಅಧ್ಯಕ್ಷರಾಗಿದ್ದವರು.
1) ಜವಹರ್ ಲಾಲ್ ನೆಹರೂ 2) ಡಾ. ಬಿ.ಆರ್.ಅಂಬೇಡ್ಕರ್ 3) ಡಾ. ರಾಜೇಂದ್ರ ಪ್ರಸಾದ್
4) ಡಾ. ರಾಧಾ ಕೃಷ್ಣನ್

**12.** ಕರ್ನಾಟಕದ ರೈಲ್ವೆ ಜಾಲದ ಒಟ್ಟು ಉದ್ದವು ಸುಮಾರು ________
1) 2800 ಕಿ.ಮೀ. 2) 2500 ಕಿ.ಮೀ. 3) 3500 ಕಿ.ಮೀ 4) 3100 ಕಿ.ಮೀ.

**13.** ಕಲಹರಿ ಮರುಭೂಮಿ ಎಲ್ಲಿದೆ?
1) ಬೋಟ್ಸ್ ವಾನಾ 2) ನೈಜೀರಿಯಾ 3) ಜೈರೆ 4) ಇಥಿಯೋಪಿಯಾ

**14.** ಈ ಕೆಳಗಿನವುಗಳಲ್ಲಿ ದೊಡ್ಡ ಅಳತೆಯ ಭೂಪಟ ಯಾವುದು ?
1) ಗೋಡೆಗೆ ಹಾಕುವ ಭೂಪಟ 2) ಹವಾಮಾನದ ಭೂಪಟಗಳು
3) (ಕಡಸ್ಟಲ್) ಜಮೀನಿನ ಭೂಪಟಗಳು 4) ಭೌತಿಕ ಭೂಪಟಗಳು

**15.** ಭೂಮಿಯ ಒಳಭಾಗದ ಯಾವ ಪದರವು ಸ್ನಿಗ್ಧ ಸ್ಥಿತಿಯಲ್ಲಿದೆ ?
1) ಸೆಂಟ್ರೋಸ್ಫಿಯರ್ 2) ಅಸ್ತನೋಸ್ಫಿಯರ್ 3) ಲಿಥೋಸ್ಫಿಯರ್ 4) ಮೀಸೋಸ್ಫಿಯರ್

**16.** ಕೆಳಕಂಡ ಯಾವ ನದಿಯು ಪಕ್ಷಿಪಾದದ ಡೆಲ್ಟಾವನ್ನು ರೂಪಿಸಿದೆ ?
1) ಮಿಸಿಸಿಪ್ಪಿ 2) ಅಮೆಜಾನ್ 3) ಗಂಗಾ 4) ನೈಲ್

---

**1)** 3 **2)** 3 **3)** 2 **4)** 1 **5)** 2 **6)** 2 **7)** 4 **8)** 3 **9)** 4 **10)** 3
**11)** 3 **12)** 4 **13)** 1 **14)** 3 **15)** 2 **16)** 1

Scanned by CamScanner

17. ವೆಗೆನೆರ್‌ನು ದಿಕ್‌ಚ್ಯುತಿ ಸಿದ್ಧಾಂತವನ್ನು ಮುಖ್ಯವಾಗಿ ಈ ಕೆಳಕಂಡ ಅಂಶವನ್ನು ವಿವರಿಸಲು ಪ್ರತಿಪಾದಿಸಿದೆ.
1) ಭೂರಾಶಿಗಳ ಭೂವೈಜ್ಞಾನಿಕ ಸಾಮ್ಯತೆಗಳು 2) ಭೂರೂಪಗಳ ವಿತರಣೆ
3) ಪ್ರಮುಖ ಹವಾಮಾನ ವ್ಯತ್ಯಾಸಗಳು 4) ಹಿಮಯುಗಗಳು

18. ಕೀಲ್ ಕಾಲುವೆಯು ಈ ಕೆಳಗಿನವುಗಳಿಗೆ ಸಂಪರ್ಕ ಕಲ್ಪಿಸುತ್ತದೆ.
1) ಬಾಲ್ಟಿಕ್ ಸಮುದ್ರ ಹಾಗೂ ನಾರ್ತ್ ಸೀ 2) ಕೆರೇಬಿಯನ್ ಸಮುದ್ರ ಹಾಗೂ ಪೆಸಿಫಿಕ್ ಮಹಾಸಾಗರ
3) ಬೆರಿಂಗ್ ಸಮುದ್ರ ಮತ್ತು ಪೆಸಿಫಿಕ್ ಮಹಾಸಾಗರ 4) ಕೆಂಪು ಸಮುದ್ರ ಮತ್ತು ಮೆಡಿಟರೇನಿಯನ್ ಸಮುದ್ರ

19. ವಾತಾವರಣದ ಶಾಖ ಏರಿಕೆ ಹೇಗೆ ನಡೆಯುತ್ತದೆ ?
1) ನೇರವಾಗಿ ಬೀಳುವ ಸೂರ್ಯಕಿರಣಗಳಿಂದ 2) ಜ್ವಾಲಾಮುಖಿಯ ಚಿಮ್ಮುವಿಕೆಗಳಿಂದ
3) ಭೂಮಿಯ ವಿಕಿರಣದಿಂದ 4) ಸಾಗರೀಯ ಪ್ರವಾಹಗಳಿಂದ

20. ಕೊಟೋಪಾಕ್ಸಿ ಇರುವುದೆಲ್ಲಿ?
1) ಬ್ರೆಜಿಲ್ 2) ಅರ್ಜೆಂಟೈನಾ 3) ಈಕ್ವೆಡಾರ್ 4) ಪೆರು

21. ಪದರ ಕಳಚುವಿಕೆ (Exfoliation)ಯು ಒಂದು
1) ರಾಸಾಯನಿಕ ಪ್ರಕ್ರಿಯೆ 2) ಜೈವಿಕ ಪ್ರಕ್ರಿಯೆ 3) ಮಾನವ ಪ್ರೇರಿತ ಪ್ರಕ್ರಿಯೆ 4) ಭೌತಿಕ ಪ್ರಕ್ರಿಯೆ

22. ಚಿಕ್ಕದಾದ ಮಳೆಹನಿಗಳು ದುಂಡನೆಯ ಆಕಾರದಲ್ಲಿರುವುದಕ್ಕೆ ಕಾರಣ
1) ಗುರುತ್ವ 2) ವಾತಾವರಣದ ಒತ್ತಡ 3) ಸ್ನಿಗ್ಧತೆ 4) ಮೇಲ್ಮೈಕರ್ಷಣ

23. ಅಂತರರಾಷ್ಟ್ರೀಯ ಖಗೋಳ ಶಾಸ್ತ್ರೀಯ ಸಂಘ (IAU)ವು ಗ್ರಹಗಳನ್ನು ಕುರಿತಂತೆ ನೀಡಿರುವ ಇತ್ತೀಚಿನ ವ್ಯಾಖ್ಯಾನದ ಪ್ರಕಾರ, ಈ ಕೆಳಗಿನ ಗ್ರಹ ಎನಿಸಿಕೊಳ್ಳುವುದಿಲ್ಲ.
1) ಶುಕ್ರ 2) ಪ್ಲೂಟೊ 3) ನೆಪ್ಚ್ಯೂನ್ 4) ಯುರೇನಸ್

24. UHF ಪಟ್ಟಿಯ ಆವರ್ತಾಂಕ ವ್ಯಾಪ್ತಿ ಎಷ್ಟು?
1) 3ರಿಂದ 30 ಮೆಗಾಹರ್ಟ್ಸ್ 2) 30 ರಿಂದ 300 ಮೆಗಾಹರ್ಟ್ಸ್
3) 300 ರಿಂದ 3000 ಮೆಗಾಹರ್ಟ್ಸ್ 4) 3000 ರಿಂದ 3000 ಮೆಗಾಹರ್ಟ್ಸ್

25. ಡೀಸೆಲ್ ಇಂಜಿನ್ನಿನಲ್ಲಿ ಈ ಕೆಳಗಿನವುಗಳು ಬಳಕೆಯಾಗುತ್ತವೆ.
1) ಸಿಲಿಂಡರ್, ಸ್ಪಾರ್ಕ್ ಪ್ಲಗ್ ಮತ್ತು ಪಿಸ್ಟನ್ 2) ಸಿಲಿಂಡರ್ ಮತ್ತು ಸ್ಪಾರ್ಕ್‌ಪ್ಲಗ್
3) ಸ್ಪಾರ್ಕ್‌ಪ್ಲಗ್ ಮತ್ತು ಪಿಸ್ಟನ್ 4) ಸಿಲಿಂಡರ್ ಮತ್ತು ಪಿಸ್ಟನ್

26. ಸಿಸ್ಟೈಟಿಸ್ ಎಂಬ ಸೋಂಕು ಯಾವ ರೋಗಕ್ಕೆ ಸಂಬಂಧಿಸಿದೆ ?
1) ಲಿವರ್ 2) ಮೂತ್ರಕೋಶ 3) ಪ್ಯಾಂಕ್ರಿಯಾಸ್ 4) ಶ್ವಾಸಕೋಶ

27. ವಿಶ್ವ ಅರಣ್ಯ ದಿನವನ್ನು ಆಚರಿಸಲಾಗುವ ದಿನಾಂಕ ಯಾವುದು ?
1) 21ನೇ ಮಾರ್ಚ್ 2) 22ನೇ ಮಾರ್ಚ್ 3) 5ನೇ ಜೂನ್ 4) 2ನೇ ಫೆಬ್ರವರಿ

28. ಪಟಾಕಿಗಳಿಗೆ ಕೆಳಕಂಡ ಧಾತುಗಳ ಲವಣಗಳಿಂದ ಬಣ್ಣವನ್ನು ನೀಡಲಾಗುತ್ತದೆ.
1) ಜಿಂಕ್ ಮತ್ತು ಮ್ಯಾಂಗನೀಸ್ 2) ಪೊಟಾಶಿಯಂ ಮತ್ತು ಮರ್ಕ್ಯುರಿ
3) ಸ್ಟ್ರಾನ್ಷಿಯಂ ಮತ್ತು ಬೇರಿಯಂ 4) ಕ್ರೋಮಿಯಂ ಮತ್ತು ನಿಕ್ಕಲ್

29. ಕೊಳಚೆ ನೀರಿನ ಸಂಸ್ಕರಣ ವ್ಯವಸ್ಥೆಗಳಲ್ಲಿ ನೀರನನು ಕ್ರಿಮಿಶುದ್ಧಗೊಳಿಸುವುದಕ್ಕಾಗಿ ಯಾವ ಎರಡು ಅನಿಲಗಳ ಬಳಕೆಯಾಗುತ್ತದೆ?
1) ಹೀಲಿಯಂ ಮತ್ತು ನೈಟ್ರೋಜನ್ 2) ಓಜೋನ್ ಮತ್ತು ಕ್ಲೋರಿನ್
3) ಆಮ್ಲಜನಕ ಮತ್ತು ಜಲಜನಕ 4) ಹೈಡ್ರೋಜನ್ ಮತ್ತು ಕ್ಲೋರಿನ್

30. ಗ್ರಾಫೀನ್ ಎಂಬುದು ನ್ಯಾನೊ ತಂತ್ರಜ್ಞಾನದ ಉತ್ಪನ್ನವಾಗಿದೆ. ಇದರ ಮಹತ್ವವೇನು?
1) ಇದು ಅತ್ಯಂತ ತೆಳುವಾದ, ಬಲವಾದ ಎರಡು ಆಯಾಮಗಳ ವಸ್ತುಗಳಲ್ಲೊಂದಾಗಿದೆ
2) ಇದು ಉತ್ತಮ ಉಷ್ಣವಾಹಕತ್ವ ಗುಣವಿರುವ ಒಂದು ವಿಧದ ಪ್ಲಾಸ್ಟಿಕ್ ವಸ್ತು.
3) ಇದು ಅತ್ಯಂತ ತೆಳುವಾದ, ಬಲವಾದ ಒಂದು ಆಯಾಮದ ವಸ್ತುಗಳಲ್ಲೊಂದಾಗಿದೆ.
4) ಇದು ಅತ್ಯಂತ ತೆಳುವಾದ 3 ಆಯಾಮಗಳ ವಸ್ತು.

31. ಒಂದು ಯಂತ್ರವು 0, 1, 2, 3, 4, 5, ಎಂಬುದನ್ನು ಅನುಕ್ರಮವಾಗಿ 0,1,10,11,100,101 ಎಂಬುದಾಗಿ ವಾಚಿಸಿದರೆ 7 ಎಂಬುದರ ವಚನಾಂಕ ಯಾವುದು?
1) 110 2) 111 3) 1000 4) 1001

32. ಒಂದು ಸಮಭುಜೀಯ ತ್ರಿಕೋನದ ಪಾರ್ಶ್ವವನ್ನು ಅಷ್ಟೇ ಎತ್ತರದ ಇನ್ನೊಂದು ಸಮಭುಜೀಯ ತ್ರಿಕೋನದ ಪಾರ್ಶ್ವಕ್ಕೆ ಅಂಟಿಸಿದರೆ ಯಾವ ಆಕಾರ ಸಿಗುತ್ತದೆ?
1) ಚೌಕ 2) ಆಯತಾಕಾರ 3) ಸಮಾಂತರ ಚತುರ್ಭುಜ 4) ಪಂಚಭುಜಾಕೃತಿ

33. ದ್ಯುತಿ ಎಳೆಯು ಕೆಳಕಂಡ ತತ್ವದ ಅನ್ವಯ ಕಾರ್ಯ ನಿರ್ವಹಿಸುತ್ತದೆ.
1) ವಿವರ್ತನೆ 2) ಸಂಪೂರ್ಣ ಆಂತರಿಕ ಪ್ರತಿಫಲನ
3) ಪ್ರತಿಫಲನ 4) ವ್ಯತಿಕರಣ

34. ಒಂದು ಪೂರ್ಣ ಸಂಖ್ಯೆ ಹಾಗೂ ಅದರ ಅನಂತರದ ಸಂಖ್ಯೆಯ ಮೊತ್ತವನ್ನು ಇನ್ನೊಂದು ಪೂರ್ಣಸಂಖ್ಯೆ ಹಾಗೂ ಅದರ ಅನಂತರದ ಸಂಖ್ಯೆಯ ಮೊತ್ತಕ್ಕೆ ಕೂಡಿಸಿದಾಗ ಬರುವ ಮೊತ್ತ 368 ಆಗಿದೆ. ಕೂಡುವಿಕೆಯ ಬದಲು ಕಳೆಯುವಿಕೆ ಮಾಡಿದರೆ ಬರುವ ವ್ಯತ್ಯಾಸ 78. ಹಾಗಿದ್ದರೆ ಈ ಸಂಖ್ಯೆಗಳು ಯಾವುವು?
1) 70 ಮತ್ತು 110 2) 71 ಮತ್ತು 113 3) 75 ಮತ್ತು 110 4) 72 ಮತ್ತು 111

35. 7, 13, 23, 37, 56, 67 ಎಂಬ ಸಂಖ್ಯಾ ಸರಣಿಯಲ್ಲಿ ಒಂದು ಸಂಖ್ಯೆಯು ತಪ್ಪಾಗಿದೆ. ಇಲ್ಲಿರಬೇಕಾಗಿದ್ದ ಸರಿಯಾದ ಸಂಖ್ಯೆ ಯಾವುದು ?
1) 22 2) 36 3) 55 4) 65

36. ಒಂದು ಗಡಿಯಾರದಲ್ಲಿ ಸಂಜೆ 3:25 ಆಗಿದ್ದಾಗ ನಿಮಿಷದ ಮುಳ್ಳು ಹಾಗೂ ಗಂಟೆಯ ಮುಳ್ಳಿನ ನಡುವೆ ಇರುವ ಕೋನ ಎಷ್ಟು?
1) $60^\circ$ 2) $47\frac{1}{2}^\circ$ 3) $50\frac{1}{2}^\circ$ 4) $52\frac{1}{2}^\circ$

| | | | | | | | | | |
|---|---|---|---|---|---|---|---|---|---|
| 17) 3 | 18) 1 | 19) 3 | 20) 3 | 21) 4 | 22) 4 | 23) 2 | 24) 3 | 25) 4 | 26) 2 |
| 27) 1 | 28) 3 | 29) 2 | 30) 1 | 31) 2 | 32) 3 | 33) 2 | 34) 4 | 35) 3 | 36) 2 |



Scanned by CamScanner

37. A, B, C, D, E ಮತ್ತು F ಎಂಬ ಆರು ರಾಜಕಾರಣಿಗಳು ಒಂದು ಸಭೆಯಲ್ಲಿ ಸಾಲಾಗಿ ಕುಳಿತಿದ್ದಾರೆ. B ಎಂಬಾತನು F ಮತ್ತು D ಗಳ ಮಧ್ಯೆ ಕುಳಿತಿದ್ದಾನೆ. E ಎಂಬಾತನು A ಮತ್ತು C ಗಳ ಮಧ್ಯೆ ಕುಳಿತಿದ್ದಾನೆ. A ಎಂಬಾತನು F ಅಥವಾ D ಯ ಪಕ್ಕದಲ್ಲಿ ಕುಳಿತಿಲ್ಲ. C ಎಂಬಾತನು D ಎಂಬಾತನ ಪಕ್ಕದಲ್ಲಿ ಕುಳಿತಿಲ್ಲ. ಹೀಗಿದ್ದಾಗ F ಎಂಬಾತನು ಯಾರ ನಡುವೆ ಕುಳಿತಿದ್ದಾನೆ. ?
1) B ಮತ್ತು C 2) B ಮತ್ತು E 3) B ಮತ್ತು D 4) A ಮತ್ತು B

38. 7 ಅಂಕಿಗಳ ಸಂಖ್ಯೆ 5 * 9 * 7 * 3ರಲ್ಲಿ * ಎಂಬುದು ಕಾಣೆಯಾಗಿರುವ ಅಂಕಿ. ಈ ಅಂಕಿಯು 11 ರಿಂದ ಭಾಗಿಸಲ್ಪಟ್ಟರೆ, ಕಾಣೆಯಾಗಿರುವ * ಅಂಕಿ ಯಾವುದು ?
1) 2 2) 3 3) 5 4) 8

39. ಇಡೀ ದಿನವನ್ನು 24 ಗಂಟೆಗಳಿಗೆ ಬದಲಾಗಿ 20 ಗಂಟೆಗಳಾಗಿ ವಿಭಾಗಿಸಿದರೆ, ಈ ಹೊಸ ವ್ಯವಸ್ಥೆಯಲ್ಲಿ ಒಂದು ರೈಲು 108 ನಿಮಿಷಗಳಷ್ಟು ತಡವಾಗಿದ್ದರೆ, ಇಲ್ಲಿ ವಾಸ್ತವವಾಗಿ ವಿಳಂಬವಾದ ಕಾಲ ಎಷ್ಟು ?
1) 90 ನಿಮಿಷಗಳು 2) 88 ನಿಮಿಷಗಳು 3) 80 ನಿಮಿಷಗಳು 4) 75 ನಿಮಿಷಗಳು

40. 3 ಸೆಂ.ಮೀ. ತ್ರಿಜ್ಯ ಹಾಗೂ 7 ಸೆಂ.ಮೀ. ಎತ್ತರ ಇರುವ ಒಂದು ಶಂಕುವಿನ ಗಾತ್ರವು ಅಷ್ಟೇ ತ್ರಿಜ್ಯ ಹಾಗೂ ಎತ್ತರ ಇರುವ ಒಂದು ಸಿಲಿಂಡರಿನ ಗಾತ್ರದ ಮೂರನೇ ಒಂದರಷ್ಟಿದ್ದರೆ ಆಗ ಸಿಲಿಂಡರ್ ಹಾಗೂ ಅಂತಹ ಮೂರು ಶಂಕುಗಳ ಗಾತ್ರಗಳ ಮೊತ್ತವು ______ ( $\pi = \frac{22}{7}$ ಎಂದು ಇಟ್ಟುಕೊಳ್ಳಿ)
1) 396 ಚ.ಸೆಂ.ಮೀ 2) 198 ಚ.ಸೆಂ.ಮೀ. 3) 44 ಚ.ಸೆಂ.ಮೀ 4) 22 ಚ.ಸೆಂ.ಮೀ.

41. (a + x b) ಎಂದರೆ (a x b )+(a + b) ಎಂದರ್ಥ ಮತ್ತು (c)x +(d) ಎಂದರೆ (c x d) – (c + d) ಎಂದರ್ಥ. ಆಗ (3 + x 4)x+(0 + x 2) =
1) 0 2) 12 3) 17 4) 24

42. ಬಾಲಕಿಯರ ಶಿಕ್ಷಣದ ಕಿರಿಯ ಹೋರಾಟಗಾರ್ತಿ ಹಾಗೂ 2012ರ ಅಕ್ಟೋಬರ್, ತಾಲಿಬಾನ್ ಭಯೋತ್ಪಾದಕರ ಧಾಳಿಯಲ್ಲಿ ಬದುಕುಳಿದ ಮಲಾಲ ಯೂಸುಫ್‌ಜಾಯಿ ಯಾವ ದೇಶದವಳು ?
1) ಅಫಘಾನಿಸ್ತಾನ 2) ಇರಾನ್ 3) ಇಜಿಪ್ಟ್ 4) ಪಾಕಿಸ್ತಾನ

43. 2012 ರಲ್ಲಿ ರಾಜ್ಯಸಭೆಗೆ ನಾಮಕರಣಗೊಂಡ ಕ್ರಿಕೆಟ್ ಪಟು
1) ಕಪಿಲ್ ದೇವ್ 2) ನವ್‌ಜೋತ್‌ಸಿಂಗ್ ಸಿಧು 3) ಸಚಿನ್ ತೆಂಡೂಲ್ಕರ್ 4) ಮೊಹಮ್ಮದ್ ಅಜರುದ್ದೀನ್

44. ಅಂಧರಿಗಾಗಿ ಪುರುಷರ ಇಪ್ಪತ್ತು ವಿಶ್ವ ಕ್ರಿಕೆಟ್ ಕಪ್ ಪಂದ್ಯಗಳನ್ನು (2012) ______ ನಗರದಲ್ಲಿ ನಡೆಸಲಾಯಿತು.
1) ಮುಂಬೈನಲ್ಲಿ ಮತ್ತು ಭಾರತವು ವಿಜಯ ಪಡೆಯಿತು. 2) ಬೆಂಗಳೂರಿನಲ್ಲಿ ಮತ್ತು ಭಾರತವು ವಿಜಯ ಪಡೆಯಿತು.
3) ಮುಂಬೈನಲ್ಲಿ ಮತ್ತು ಪಾಕಿಸ್ತಾನವು ವಿಜಯ ಪಡೆಯಿತು. 4) ಬೆಂಗಳೂರಿನಲ್ಲಿ ಮತ್ತು ಪಾಕಿಸ್ತಾನವು ವಿಜಯ ಪಡೆಯಿತು.

45. "ಮನುಷ್ಯನಿಗೆ ಅದು ಒಂದು ಸಣ್ಣ ಹೆಜ್ಜೆ ಆದರೆ ಮನುಕುಲಕ್ಕೆ ಅದು ಭಾರೀ ಜಿಗಿತ" ಈ ಪ್ರಸಿದ್ಧವಾದ ಹೇಳಿಕೆ ಯಾರದ್ದು ?
1) ಎಪಿಜೆ ಕಲಾಂ 2) ಬರಾಕ್ ಒಬಾಮ 3) ನೀಲ್ ಆರ್ಮ್‌ಸ್ಟ್ರಾಂಗ್ 4) ಡೀನ್ ಆರ್ಮ್‌ಸ್ಟ್ರಾಂಗ್

46. 2012ರ ಡಿಸೆಂಬರ್ ತಿಂಗಳಲ್ಲಿ ನಡೆದ ಕೆಳಕಂಡ ದೇಶದ ಸಾರ್ವತ್ರಿಕ ಚುನಾವಣೆಗಳಲ್ಲಿ ಶ್ರೀ ಶಿಂಜೊ ಅಬೆಯವರು ಲಿಬರಲ್ ಪ್ರಜಾಸತ್ತಾತ್ಮಕ ಪಕ್ಷವನ್ನು ಯಶಸ್ವಿಯಾಗಿ ಅಧಿಕಾರಕ್ಕೆ ತಂದರು.
1) ಜಪಾನ್ 2) ಚೀನಾ 3) ಉತ್ತರ ಕೊರಿಯಾ 4) ಇಂಡೋನೇಷಿಯಾ

47. ಸತತವಾಗಿ ನಾಲ್ಕು ಬಲನ್ ಡೋರ್ ಪ್ರಶಸ್ತಿಗಳನ್ನು ಗೆದ್ದುಕೊಂಡು ದಾಖಲೆ ಮಾಡಿದ ಅಂತರ ರಾಷ್ಟ್ರೀಯ ಸಾಕರ್ ಆಟಗಾರ
1) ಆಂಡ್ರೆಸ್ ಇನಿಯೆಸ್ಟ 2) ಗರ್ಡಮ್ಯೂಲರ್ 3) ಲಿಯೋನೆಲ್ ಮೆಸ್ಸಿ 4) ಕ್ರಿಸ್ಟಿಯಾನೊ ರೊನಾಲ್ಡೊ

48. ಮೊದಲ ಮಹಿಳಾ ಕಬ್ಬಡ್ಡಿ ವಿಶ್ವಕಪ್ (2012) ಗೆದ್ದುಕೊಂಡ ದೇಶ
1) ಇರಾನ್ 2) ಭಾರತ 3) ಪಾಕಿಸ್ತಾನ 4) ದಕ್ಷಿಣ ಕೊರಿಯಾ

49. ಮಿಯನ್ಮಾರ್ (ಬರ್ಮಾ)ನ ಶ್ರೀಮತಿ ಆಂಗ್ ಸಾನ್ ಸೂಕಿ ಇವರು
1) ಅಧ್ಯಕ್ಷೆ 2) ಪ್ರಧಾನಮಂತ್ರಿ
3) ವಿದೇಶಾಂಗ ವ್ಯವಹಾರಗಳ ಸಚಿವೆ 4) ವಿರೋಧ ಪಕ್ಷದ ನಾಯಕಿ

50. 2013ರ ಆರಂಭದಲ್ಲಿ ಆಫ್ರಿಕಾದ ಮಾಲಿ ದೇಶದ ಕೆಲವು ಭಾಗಗಳನ್ನು ವಶಪಡಿಸಿಕೊಂಡಿದ್ದ ಇಸ್ಲಾಮಿಕ ದಂಗೆಕೋರರನ್ನು ಉಚ್ಚಾಟಿಸುವುದಕ್ಕಾಗಿ ಈ ಕೆಳಗಿನ ದೇಶವು ಮಧ್ಯ ಪ್ರವೇಶ ಮಾಡಿತು.
1) ಸಂಯುಕ್ತ ಸಂಸ್ಥಾನ 2) ಫ್ರಾನ್ಸ್ 3) ಯುನೈಟೆಡ್ ಕಿಂಗ್‌ಡಮ್ 4) ಭಾರತ

51. ಬೆಂಗಳೂರನ್ನು ಈ ಕೆಳಗಿನ ಪ್ರದೇಶಕ್ಕೆ ಸಂಪರ್ಕಿಸುವ 1000 ಕಿಮೀ ಗ್ಯಾಸ್ ಕೊಳವೆ ಮಾರ್ಗವನ್ನು 2013ರ ಫೆಬ್ರವರಿಯಲ್ಲಿ ಮೊದಲ ಬಾರಿಗೆ ರಾಜ್ಯ ಸ್ವಾಮ್ಯದ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ ಕಾರ್ಯಾರಂಭಗೊಳಿಸಿತು.
1) ಮಹಾರಾಷ್ಟ್ರದಲ್ಲಿರುವ ದಭೋಲ್ 2) ಗುಜರಾತ್‌ನಲ್ಲಿರುವ ದಭೋಲ್
3) ಮಹಾರಾಷ್ಟ್ರದಲ್ಲಿರುವ ನಾಗಪುರ 4) ಗುಜರಾತ್‌ನಲ್ಲಿರುವ ಸೂರತ್

52. ಏಷಿಯಾದ ಯಾವ ದೇಶದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯವರು 2013ರ ಜನವರಿಯಲ್ಲಿ ಸಂಸತ್ತಿನಿಂದ ಖಂಡನೆಗೊಳಗಾದರು?
1) ಪಾಕಿಸ್ತಾನ 2) ಬಾಂಗ್ಲಾದೇಶ 3) ಮಾಲ್ಡೀವ್ಸ್ 4) ಶ್ರೀಲಂಕಾ

53. ಈ ಕೆಳಗಿನ ನಗರದಲ್ಲಿ 2013ರ ಜನವರಿಯಲ್ಲಿ ರಾಷ್ಟ್ರೀಯ ಸಾಹಿತ್ಯೋತ್ಸವ ನಡೆಯಿತು.
1) ಜೈಪುರ್ 2) ಹೈದ್ರಾಬಾದ್ 3) ಕೋಲ್ಕತ್ತ 4) ಬೆಂಗಳೂರು

54. 2013ರ ಮಾರ್ಚ್‌ನಲ್ಲಿ ಪೋಪ್ ಫ್ರಾನ್ಸಿಸ್ 1 ಆಗಿ ಆಯ್ಕೆಯಾದ ಕಾರ್ಡಿನಲ್ ಜಾರ್ಜ್ ಮಾರಿಯೊ ಬರ್ಗಾಗ್ಲಿಯೋ ಯಾವ ದೇಶದವರು ?
1) ಬ್ರೆಜಿಲ್ 2) ಇಟಲಿ 3) ಅರ್ಜೆಂಟೈನಾ 4) ಚಿಲಿ

55. ಪ್ರತಿಷ್ಠಿತವಾದ ದಾದಾ ಸಾಹೇಬ್ ಫಾಲ್ಕೆ ಹಾಗೂ ಎನ್.ಟಿ.ರಾಮರಾವ್ ಚಲನಚಿತ್ರ ಪ್ರಶಸ್ತಿಗಳನ್ನು ಇತ್ತೀಚೆಗೆ (ಏಪ್ರಿಲ್ 2013) ಅನುಕ್ರಮವಾಗಿ ಈ ಕೆಳಗಿನವರಿಗೆ ನೀಡಲಾಯಿತು.
1) ಪ್ರಾಣ್ ಕಿಶನ್ ಸಿಕಂದ್ ಮತ್ತು ಅಮಿತಾಬ್ ಬಚ್ಚನ್ 2) ಅಮಿತಾಬ್ ಬಚ್ಚನ್ ಮತ್ತು ಪ್ರಾಣ್ ಕಿಶನ್ ಸಿಕಂದ್
3) ಶಾರೂಕ್ ಖಾನ್ ಮತ್ತು ಸಲ್ಮಾನ್ ಖಾನ್ 4) ಧರ್ಮೇಂದ್ರ ಮತ್ತು ರಾಜೇಶ್ ಖನ್ನಾ

---

37) 1 38) 4 39) 1 40) 1 41) 3 42) 4 43) 3 44) 2 45) 3 46) 1
47) 3 48) 2 49) 4 50) 2 51) 1 52) 4 53) 1 54) 3 55) 1



Scanned by CamScanner

56. 2013ರಲ್ಲಿ ನೀಡಲಾದ 85ನೇ ವಾರ್ಷಿಕ ಅಕಾಡೆಮಿ ಪ್ರಶಸ್ತಿ (ಆಸ್ಕರ್ ಪ್ರಶಸ್ತಿ)ಗಳ ಪೈಕಿ ಆಂಗ್ ಲೀ ಯವರ ಲೈಫ್ ಆಫ್ ಪೈ ಎಂಬ ಚಲನಚಿತ್ರ ಎಷ್ಟು ಪ್ರಶಸ್ತಿಗಳನ್ನು ಗೆದ್ದುಕೊಂಡಿತು ?
1) ಒಂದು 2) ಎರಡು 3) ಮೂರು 4) ನಾಲ್ಕು

57. ನ್ಯಾಯಮೂರ್ತಿ ಡಿ.ಎಚ್. ವಘೇಲಾ ಅವರಿಗಿಂತ ಮುಂಚೆ ಇದ್ದ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಮೂರ್ತಿ ಯಾರು ?
1) ಮಂಜುಳಾ ಚೆಲ್ಲೂರ್ 2) ಸಂತೋಷ್ ಹೆಗ್ಡೆ 3) ವಿಕ್ರಂಜಿತ್ ಸೆನ್ 4) ಜೆ.ಎಸ್. ಕೆಹರ್

58. ಸಂಯುಕ್ತ ಸಂಸ್ಥಾನದಲ್ಲಿ ನೆಲೆಸಿರುವ ವಿಕಾಸ್ ಗೌಡ ಅವರ ಹೆಸರು ಯಾವ ಅಥ್ಲೆಟಿಕ್ ಆಟಕ್ಕೆ ಸಂಬಂಧಿಸಿದೆ ?
1) ಡಿಸ್ಕಸ್ ಎಸೆತ 2) ಹೈಜಂಪ್ 3) ಜಾವಲಿನ್ ಎಸೆತ 4) ಕುಸ್ತಿ

59. ಐದು ದೇಶಗಳ ಒಂದು ಸಮೂಹಕ್ಕೆ ಸಂಬಂಧಿಸಿದ BRICS ಎಂಬ ಸಂಕ್ಷಿಪ್ತ ರೂಪದಲ್ಲಿ B ಮತ್ತು C ಅಕ್ಷರಗಳು ಅನುಕ್ರಮವಾಗಿ ಯಾವ ದೇಶಗಳನ್ನು ಪ್ರತಿನಿಧಿಸುತ್ತವೆ ?
1) ಬಾಂಗ್ಲಾದೇಶ ಮತ್ತು ಚೀನಾ 2) ಬ್ರೆಜಿಲ್ ಮತ್ತು ಕೆನಡಾ
3) ಬ್ರೆಜಿಲ್ ಮತ್ತು ಚೀನಾ 4) ಬಾಂಗ್ಲಾದೇಶ ಮತ್ತು ಕಾಂಬೋಡಿಯಾ

60. ಚೀನಾದ ಈಗಿನ ಅಧ್ಯಕ್ಷರು
1) ಟಿ.ಕೆ. ಲಿಮ್ 2) ಚೌ.ಎನ್.ಲಾಯ್ 3) ಮಾವೊತ್ಸೆ ಜಿಯಾವೊ 4) ಕ್ಸಿ ಜಿನ್ ಪಿಂಗ್

61. ನೊವಾರ್ಟಿಸ್ ಉತ್ಪನ್ನವೊಂದರ ಮಾರ್ಪಾಟಿಗೆ ಪೇಟೆಂಟ್ ನೀಡಬೇಕೆಂಬ ಮನವಿಯನ್ನು ತಿರಸ್ಕರಿಸಿ 2013ರ ಏಪ್ರಿಲ್‌ನಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ಒಂದು ಮಹತ್ವದ ತೀರ್ಪು ಯಾವ ಔಷಧಕ್ಕೆ ಸಂಬಂಧಿಸಿದ್ದಾಗಿದೆ ?
1) ಮಧುಮೇಹಕ್ಕಾಗಿ ನೀಡುವ ಗ್ಲೀವೆಕ್ 2) ಕ್ಷಯರೋಗಕ್ಕಾಗಿ ನೀಡುವ ಇಮಾಟಿನಿಬ್
3) ದೀರ್ಘಕಾಲದ ಲುಕೇಮಿಯಾಗೆ ನೀಡುವ ಗ್ಲೀವೆಕ್ 4) ಡಿಮೆನ್ಶಿಯಾಗೆ ನೀಡುವ ಜೀಟಾ–ಮೆಟ್

62. ಇತ್ತೀಚೆಗೆ ______ ತೀರದಿಂದಾಚೆಗೆ ______ ಕಡಲಸೈನಿಕರಿಂದ ಭಾರತದ ಇಬ್ಬರು ಮೀನುಗಾರರು ಮರಣಾಂತಿಕ ಗುಂಡಿನೇಟಿಗೆ ತುತ್ತಾದರು. ಇದು ಗಂಭೀರವಾದ ಕಾನೂನು ಹಾಗೂ ರಾಜಕೀಯ ಗಮನವನ್ನು ಸೆಳೆದಿದೆ.
1) ತಮಿಳುನಾಡು, ಶ್ರೀಲಂಕಾದ ಕಡಲ ಸೈನಿಕರು 2) ಕೇರಳ, ಸೊಮಾಲಿಯಾದ ಕಡಲ ಸೈನಿಕರು
3) ಗುಜರಾತ್, ಪಾಕಿಸ್ತಾನದ ಕಡಲ ಸೈನಿಕರು 4) ಕೇರಳ, ಇಟಲಿಯ ಕಡಲ ಸೈನಿಕರು

63. 'ಟೈಗರ್' ಮತ್ತು 'ಪಿಜನ್' ಎಂಬ ಅಡ್ಡ ಹೆಸರುಗಳನ್ನು ಪಡೆದಿರುವ ಅಂತರ ರಾಷ್ಟ್ರೀಯ ಕ್ರಿಕೆಟ್ ಪಟುಗಳ ಹೆಸರುಗಳು ಅನುಕ್ರಮವಾಗಿ ಹೀಗಿವೆ.
1) ಸೈಯದ್ ಕಿರ್ಮಾನಿ ಮತ್ತು ಜಹೀರ್‌ಖಾನ್ 2) ಎಂ.ಎ.ಕೆ. ಪಟೌಡಿ ಮತ್ತು ಗ್ಲೆನ್ ಮೆಕ್ ಗ್ರಾತ್
3) ಸೌರವ್ ಗಂಗೂಲಿ ಮತ್ತು ಬ್ರೆಟ್ ಲೀ 4) ಮೊಹಮದ್ ಅಜರುದ್ದೀನ್ ಮತ್ತು ಅನಿಲ್ ಕುಂಬ್ಳೆ

64. 2013ರ ಏಪ್ರಿಲ್‌ನಲ್ಲಿ ಇರುವಂತೆ, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ.
1) ಹಿಲರಿ ಕ್ಲಿಂಟನ್ 2) ಕಾಂಡೊಲಿನಾ ರೈಸ್ 3) ಬಾನ್ ಕಿ ಮೂನ್ 4) ಕೋಫಿ ಅನ್ನಾನ್

65. 2013ರ ಏಪ್ರಿಲ್‌ನಲ್ಲಿ ಭಾರತದ ರಿಸರ್ವ್ ಬ್ಯಾಂಕಿನ ಗೌರ್ನರ್ ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷರ ಹೆಸರುಗಳು ಅನುಕ್ರಮವಾಗಿ ______ ಮತ್ತು ______
1) ಮಾಂಟೆಕ್‌ಸಿಂಗ್ ಅಹ್ಲುವಾಲಿಯಾ ಮತ್ತು ಡಿ. ಸುಬ್ಬರಾವ್ 2) ಡಿ. ಸುಬ್ಬರಾವ್ ಮತ್ತು ಮಾಂಟೆಕ್ ಸಿಂಗ್ ಅಹ್ಲುವಾಲಿಯಾ
3) ಡಿ. ಸುಬ್ಬರಾವ್ ಮತ್ತು ಮನ್ ಮೋಹನ್ ಸಿಂಗ್ 4) ಸಿ. ರಂಗರಾಜನ್ ಮತ್ತು ಮನ್ ಮೋಹನ್ ಸಿಂಗ್

66. ಪ್ರಸ್ತುತದಲ್ಲಿ ಪುರುಷರ ಹಾಗೂ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಪಂದ್ಯಗಳನ್ನು ಅನುಕ್ರಮವಾಗಿ ____ ಮತ್ತು ದೇಶಗಳು ನಡೆಸುತ್ತಿವೆ.
1) ಆಸ್ಟ್ರೇಲಿಯಾ ಮತ್ತು ಭಾರತ 2) ಭಾರತ ಮತ್ತು ಆಸ್ಟ್ರೇಲಿಯಾ
3) ಭಾರತ ಮತ್ತು ಇಂಗ್ಲೆಂಡ್ 4) ಆಸ್ಟ್ರೇಲಿಯಾ ಮತ್ತು ವೆಸ್ಟ್ ಇಂಡೀಸ್

67. ಇತ್ತೀಚೆಗೆ ____ ನದಿಯ ನೀರನ್ನು ______ ದೇಶವು ತಿರುಗಿಸಿಕೊಳ್ಳಲು ಯೋಜನೆಗಳನ್ನು ಹಾಕುತ್ತಿರುವುದು ಭಾರತಕ್ಕೆ ಕಳವಳಗಳನ್ನು ಉಂಟು ಮಾಡಿದೆ.
1) ತೀಸ್ತಾ ಬಾಂಗ್ಲಾದೇಶ 2) ಬ್ರಹ್ಮಪುತ್ರ ಬಾಂಗ್ಲಾದೇಶ 3) ಬ್ರಹ್ಮಪುತ್ರ ಚೀನಾ 4) ಸಟ್ಲೆಜ್, ಪಾಕಿಸ್ತಾನ

68. ಬಂಧನದಲ್ಲಿದ್ದ ಅಪರಾಧಿಗಳನ್ನು ನೇಣಿಗೇರಿಸಿದ ಎರಡು ಪ್ರಕರಣಗಳಿಂದಾಗಿ, ಮರಣ ದಂಡನೆ ಕುರಿತಂತೆ ಭಾರತದಲ್ಲಿ ಮತ್ತೊಮ್ಮೆ ಚರ್ಚೆಗಳು ನಡೆದಿವೆ. ಜಗತ್ತಿನಲ್ಲಿ ಈಗ ಮರಣ ದಂಡನೆಯನ್ನು ಸುಮಾರು ಎಷ್ಟು ದೇಶಗಳು ರದ್ದುಪಡಿಸಿವೆ ?
1) 15 2) 50 3) 90 4) 150

69 ಹಾಗೂ 70 ನೇ ಪ್ರಶ್ನೆಯಲ್ಲಿ ವಿವರಣೆ I ಮತ್ತು ವಿವರಣೆ II ಎಂಬ ಎರಡು ವಿವರಣೆಗಳಿವೆ. ಕೆಳಕಂಡ ಸಂಕೇತಗಳನ್ನು ಬಳಸಿ ಇವುಗಳಿಗೆ ಉತ್ತರಿಸಿ.
(1) ಎರಡೂ ವಿವರಣೆಗಳು ಸರಿಯಾಗಿವೆ 2) I ನೇ ವಿವರಣೆ ಮಾತ್ರ ಸರಿಯಾಗಿದೆ.
(3) II ನೇ ವಿವರಣೆ ಮಾತ್ರ ಸರಿಯಾಗಿದೆ. (4) ಎರಡೂ ವಿವರಣೆಗಳು ತಪ್ಪಾಗಿವೆ.

69. I 2013 ರ ಏಪ್ರಿಲ್‌ನಲ್ಲಿ ನಿಧನರಾದ ಶ್ರೀಮತಿ ಮಾರ್ಗರೆಟ್ ಥ್ಯಾಚರ್‌ರವರು ಬ್ರಿಟನ್ನಿನ ಮೊದಲ ಮಹಿಳಾ ಪ್ರಧಾನ ಮಂತ್ರಿಯಾಗಿದ್ದರು.
II ಟೋನಿಬ್ಲೇರ್‌ರವರು ಇಂಗ್ಲೆಂಡಿನ ಈಗಿನ ಪ್ರಧಾನ ಮಂತ್ರಿ

70. I ಸಶಸ್ತ್ರ ಬಲಗಳ ವಿಶೇಷ ಅಧಿಕಾರ ಕಾಯಿದೆ (AFSPA) 1958ರ ವಿರುದ್ಧ ಅಮರಣಾಂತ ಉಪವಾಸ ಚಳುವಳಿ ನಡೆಸಿದ ಕಾರಣಕ್ಕಾಗಿ ಮಣಿಪುರದ ಮಹಿಳೆ ಇರೋಮ್ ಶರ್ಮಿಳಾ ಅವರು ಸುದ್ದಿಯಲ್ಲಿದ್ದರು.
II ಮೇಧಾ ಪಾಟ್ಕರ್ ಅವರು ಮಹಿಳಾ ಕಾದಂಬರಿಗಾರ್ತಿಯಾಗಿದ್ದು ಪ್ರತಿಷ್ಠಿತ ಬೂಕರ್ ಬಹುಮಾನವನ್ನು ಗಳಿಸಿದ್ದಾರೆ.

71. ಅತಿ ಹೆಚ್ಚಿನ ಮುಸ್ಲಿಂ ಜನಸಂಖ್ಯೆಯನ್ನು ಹೊಂದಿರುವ ದೇಶ
1) ಸೌದಿ ಅರೇಬಿಯಾ 2) ಪಾಕಿಸ್ತಾನ 3) ಭಾರತ 4) ಇಂಡೋನೇಶಿಯಾ

72. ಗಾಲಾಪಾಗೋಸ್ ಆರ್ಕಿಪೆಲಾಗೋ ಯಾವ ದೇಶಕ್ಕೆ ಸೇರಿದೆ ?
1) ಅರ್ಜೆಂಟೈನಾ 2) ಬ್ರೆಜಿಲ್ 3) ಈಕ್ವೆಡಾರ್ 4) ಪೆರು

73. ಐವರು ವಿದೇಶಿಯರು ಸೇರಿದಂತೆ ಹದಿನೇಳು ಮಂದಿಯ ಮರಣಕ್ಕೆ ಕಾರಣವಾದ ಹಾಗೂ 2013ರ ಏಪ್ರಿಲ್‌ನಲ್ಲಿ ನ್ಯಾಯಾಲಯವು ತೀರ್ಪು ನೀಡಿರುವ "ಜರ್ಮನ್ ಬೇಕರಿ ಪ್ರಕರಣ" ಸ್ಫೋಟಗಳು ನಡೆದದ್ದು.
1) ಮುಂಬೈ, 2008 ರಲ್ಲಿ 2) ಪುಣೆ, 2008ರಲ್ಲಿ 3) ಪುಣೆ, 2010ರಲ್ಲಿ 4) ಗೋಧ್ರಾಪಟ್ಟಣ, 2002ರಲ್ಲಿ

56) 4 57) 3 58) 1 59) 3 60) 4 61) 3 62) 4 63) 2 64) 3 65) 2
66) 2 67) 3 68) 4 69) 2 70) 2 71) 4 72) 3 73) 3



Scanned by CamScanner

74. ಬಣ್ಣದ ಟಿ.ವಿ. ಸೆಟ್‌ಗಳಿಂದ CRT ಟ್ಯೂಬ್ ಮಾದರಿ ಬರುವ ಅಪಾಯಕಾರಿಯಾದ ವಿಕಿರಣವನ್ನು ತಯಾರಿಕಾದಾರರು ಸೂಕ್ತವಾಗಿ ಶೀಲ್ಡ್ ಮಾಡಬೇಕಾಗಿರುತ್ತದೆ. ಈ ವಿಕಿರಣಗಳು ಯಾವುವು ?

1) ಮೈಕ್ರೋ ತರಂಗಗಳು 2) ಯುವಿ ಕಿರಣಗಳು 3) ಐ ಆರ್ ಕಿರಣಗಳು 4) ಮೆದು ಕ್ಷ-ಕಿರಣಗಳು

75. 2013ರ ಪದ್ಮ ಶ್ರೀ ಪ್ರಶಸ್ತಿ ಪುರಸ್ಕೃತರಾದ ಕರ್ನಾಟಕದ ವ್ಯಕ್ತಿ

1) ತಾರಾ 2) ಬಿ.ಜಯಶ್ರೀ 3) ಅರುಂಧತಿ ನಾಗ್ 4) ಉಮಾಶ್ರೀ

76. ಆಸ್ಟ್ರೇಲಿಯಾದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾದವರು

1) ರಿಕಿ ಪಾಂಟಿಂಗ್ 2) ವಿರಾಟ್ ಕೋಹ್ಲಿ 3) ಉಮರ್ ಗುಲ್ 4) ಕ್ರಿಸ್ ಗೇಲ್

77. ಇತ್ತೀಚೆಗೆ ನಿಧನರಾದ ಸುಪ್ರಸಿದ್ಧ ಕಾದಂಬರಿಕಾರ ಚಿನುವಾ ಅಚಿಬೆ ಯಾವ ದೇಶದವರು ?

1) ಸೊಮಾಲಿಯಾ 2) ನೈಜೀರಿಯಾ 3) ಇಥಿಯೋಪಿಯಾ 4) ಉಗಾಂಡ

78. ಭಾರತದ ಮುಖ್ಯ ನ್ಯಾಯಮೂರ್ತಿ ಯಾರು ?

1) ಅಲ್ತಮಸ್ ಕಬೀರ್ 2) ದಿನಕರ್ 3) ಸಂತೋಷ್ ಹೆಗ್ಡೆ 4) ಶಿವರಾಜ್ ಪಾಟೀಲ್

79. 2012ರ ಜುಲೈನಲ್ಲಿ ಭಾರತದ ಯಾವ ರಾಜ್ಯವು ವಿಶಸಂಸ್ಥೆಯ ಸಾರ್ವಜನಿಕ ಸೇವಾ ಪ್ರಶಸ್ತಿ ಪ್ರಮಾಣ ಪತ್ರವನ್ನು ಪಡೆದುಕೊಂಡಿತು.

1) ಮಧ್ಯ ಪ್ರದೇಶ 2) ಗುಜರಾತ್ 3) ಕೇರಳ 4) ಮಹಾರಾಷ್ಟ್ರ

80. ಭಾರತದಲ್ಲಿ ಜನವರಿ 25ನ್ನು ಯಾವ ದಿನವೆಂದು ಆಚರಿಸಲಾಗುತ್ತದೆ ?

1) ಗ್ರಾಹಕರ ದಿನ 2) ಹೆಣ್ಣು ಮಗುವಿನ ದಿನ
3) ಎಲ್ಲರಿಗೂ ಆರೋಗ್ಯ ದಿನ 4) ರಾಷ್ಟ್ರೀಯ ಮತದಾರರ ದಿನ

81. ಅಲಿಪ್ತ ಚಳವಳಿಯ XVI ನೇ ಶೃಂಗ ಸಭೆಯ 2012ರಲ್ಲಿ ಎಲ್ಲಿ ನಡೆಯಿತು ?

1) ತೆಹರಾನ್ 2) ಹವಾನಾ 3) ಕೌಲಾಲಂಪುರ್ 4) ನವದೆಹಲಿ

82. 2013ರ ಜನವರಿಯಲ್ಲಿ, ಭಾರತದ ಗಣರಾಜ್ಯೋತ್ಸವ ಆಚರಣೆಯ ಮುಖ್ಯ ಅತಿಥಿಯಾಗಿದ್ದವರು.

1) ಕೊರಿಯಾ ಗಣರಾಜ್ಯದ ಅಧ್ಯಕ್ಷರಾದ ಲೀ ಮಿಯುಂಗ್ ಬುಕ್
2) ಭೂತಾನಿನ ರಾಜ ಜಿಗ್ಮೆ ಖೇಸರ್ ನಾಮ್ ಗೈಲ್ ವಾಂಗ್ ಚುಕ್
3) ಇಂಡೋನೇಶಿಯಾದ ಅಧ್ಯಕ್ಷರಾದ ಸುಸಿಕೊ ಬಂಬಾಂಗ್ ಯುಧೋಯೊನೊ
4) ಥಾಯ್ಲೆಂಡಿನ ಪ್ರಧಾನ ಮಂತ್ರಿ ಯಿಂಗ್ಲಕ್ ಶಿನವಾತ್ರ

83. 2012ರ ಜುಲೈನಲ್ಲಿ ನಡೆದ ಲಂಡನ್ ಒಲಂಪಿಕ್ಸ್‌ನ ಪ್ರಾರಂಭೋತ್ಸವದಲ್ಲಿ ಭಾರತೀಯ ವಿಭಾಗದ ಧ್ವಜವನ್ನು ಹಿಡಿದಿದ್ದವರು.

1) ಸುಶೀಲ್ ಕುಮಾರ್ 2) ಗಗನ್ ನಾರಂಗ್ 3) ಮೇರಿಕೋಂ 4) ಯೋಗೇಶ್ವರ ದತ್

84. 2012–13 ರಲ್ಲಿ 20ನೇ ಕಾನೂನು ಆಯೋಗದ ಅಧ್ಯಕ್ಷರಾಗಿ ನೇಮಕ ಗೊಂಡಿರುವವರು

1) ನ್ಯಾಯಮೂರ್ತಿ ಪಿ.ವಿ. ರೆಡ್ಡಿ 2) ನ್ಯಾಯಮೂರ್ತಿ ಎಂ. ಜಗನ್ನಾಥ ರಾವ್
3) ನ್ಯಾಯಮೂರ್ತಿ ಡಿ.ಕೆ. ಜೈನ್ 4) ನ್ಯಾಯಮೂರ್ತಿ ಎ.ಆರ್. ಲಕ್ಷ್ಮಣನ್

85. 2012ರ ಜುಲೈನಲಲಿ ನಡೆದ ಲಂಡನ್ ಒಲಂಪಿಕ್ಸ್‌ನ ಧ್ಯೇಯ ವಾಕ್ಯ

1) One World, One Dream 2) Inspire a Generation
3) Friends Forever 4) The Celebration of the Century

86. 2012 ರಲ್ಲಿ ನೊಬಲ್ ಶಾಂತಿ ಪ್ರಶಸ್ತಿಯನ್ನು ಯಾರಿಗೆ ನೀಡಲಾಯಿತು ?

1) ಆಫ್ರಿಕನ್ ಒಕ್ಕೂಟ 2) ಆಗ್ನೇಯ ಏಷಿಯಾ ರಾಷ್ಟ್ರಗಳ ಸಂಘ
3) ಉತ್ತರ ಅಟ್ಲಾಂಟಿಕ್ ಟ್ರೀಟಿ ಆರ್ಗನೈಸೇಶನ್ 4) ಯುರೋಪಿಯನ್ ಒಕ್ಕೂಟ

87. ಯುರೋಪಿಯನ್ ಒಕ್ಕೂಟದ ಹನ್ನೆರಡು ಸದಸ್ಯ ರಾಜ್ಯಗಳು ಯುರೋ ಎಂಬ ತಮ್ಮ ಹೊಸ ನಾಣ್ಯ ಪದ್ಧತಿಯನ್ನು _____ ದಿನಾಂಕದಿಂದ ಜಾರಿಗೊಳಿಸಿದರು.

1) ಜನವರಿ 1, 2002 2) ಜನವರಿ 1, 2003 3) ಜನವರಿ 1, 2004 4) ಜನವರಿ 1, 2005

88. 2012ರ ಜುಲೈನಲ್ಲಿ, ಸಂಯುಕ್ತ ಸಂಸ್ಥಾನವು ಯಾವ ದೇಶವನ್ನು ಪ್ರಮುಖ Non-Nato ಮಿತ್ರರಾಷ್ಟ್ರ ಎಂದು ಘೋಷಿಸಿದೆ ?

1) ಪಾಕಿಸ್ತಾನ 2) ಅಫ್ಘಾನಿಸ್ತಾನ 3) ಇಸ್ರೇಲ್ 4) ದಕ್ಷಿಣ ಕೊರಿಯಾ

89. 2009ರಲ್ಲಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮಕ್ಕೆ ಈ ಕೆಳಕಂಡಂತೆ ಪುನರ್ ನಾಮಕರಣ ಮಾಡಲಾಯಿತು.

1) ಇಂದಿರಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಯದ್ಯೋಗ ಖಾತರಿ ಅಧಿನಿಯಮ
2) ಜವಹರಲಾಲ್ ನೆಹರೂ ರಾಷ್ಟ್ರೀಐ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ
3) ರಾಜೀವ್ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ
4) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ

90. "ಕಾನೂನಿನ ಪ್ರಕಾರ ರಾಜ್ಯವು ನಿರ್ಣಯಿಸಿದ ರೀತಿಯಲ್ಲಿ ರಾಜ್ಯವು ಆದರಿಂದ ಹದಿನಾಲ್ಕರ ವಯಸ್ಸಿನವರೆಗಿನ ಎಲ್ಲಾ ಮಕ್ಕಳಿಗೂ ಉಚಿತವಾಗಿ ಹಾಗೂ ಕಡ್ಡಾಯವಾಗಿ ಶಿಕ್ಷಣವನ್ನು ಒದಗಿಸತಕ್ಕದ್ದು". ಇದು ಭಾರತದ ಸಂವಿಧಾನಕ್ಕೆ ಸೇರ್ಪಡೆ ಮಾಡಲಾದ ಹೊಸ ಅನುಚ್ಛೇದ. ಇದು ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ ?

1) ರಾಜ್ಯ ನೀತಿಯ ನಿರ್ದೇಶಕ ತತ್ವ 2) ಮೂಲಭೂತ ಹಕ್ಕುಗಳು
3) ವೈಯಕ್ತಿಕ ಕಾನೂನುಗಳ ಅಡಿಯಲ್ಲಿನ ಹಕ್ಕುಗಳು 4) ಕಾನೂನಿನ ಹಕ್ಕುಗಳು

91. 2012ರ ಜೂನ್ 2 ರಂದು ಜೀವಾವಧಿ ಕಾರಾಗೃಹ ಶಿಕ್ಷೆಯನ್ನು ಪಡೆದ ಈಜಿಪ್ಟ್‌ನ ಹಿಂದಿನ ಅಧ್ಯಕ್ಷರ ಹೆಸರೇನು ?

1) ಯೂಸುಫ್ ರಾಜಾ ಗಿಲಾನಿ 2) ಅಹ್ಮದ್ ರಿಫಾತ್ 3) ಹೋಸ್ನಿ ಮುಬಾರಿಕ್
4) ಜೊ ಕಿಲಾಯಿ

92. ರಷ್ಯಾ ದೇಶವು 2012ರ ಆಗಸ್ಟ್ 22 ರಂದು ______ ನೇ ಸದಸ್ಯ ದೇಶವಾಗಿ ವಿಶ್ವ ವ್ಯಾಪಾರ ಸಂಸ್ಥೆಗೆ ಪ್ರವೇಶಿಸಿತು.

1) 100ನೇ 2) 126ನೇ 3) 150ನೇ 4) 156ನೇ

---

**74)** 4 **75)** 2 **76)** 1 **77)** 2 **78)** 1 **79)** 1 **80)** 4 **81)** 1 **82)** 2 **83)** 1
**84)** 3 **85)** 2 **86)** 4 **87)** 1 **88)** 2 **89)** 4 **90)** 2 **91)** 3 **92)** 4

Scanned by CamScanner

93. ರಾಜ್ಯವೊಂದರ ರಾಜ್ಯಪಾಲರು ಈ ಕೆಳಗಿನದನ್ನು ಮಾಡುವ ಹಾಗಿಲ್ಲ.

1) ಅವಧಿಗೆ ಮುನ್ನವೇ ಅಸೆಂಬ್ಲಿಯ ವಿಸರ್ಜನೆ

2) ಶಾಸಕರಲ್ಲದವರನ್ನು ಮುಖ್ಯಮಂತ್ರಿಯಾಗಿ ನೇಮಿಸುವುದು.

3) ಸಚಿವ ಮಂಡಳಿಯ ಸಹಾಯ ಹಾಗೂ ಸಲಹೆಯಂತೆ ಕಾರ್ಯ ನಿರ್ವಹಿಸುವುದು

4) ರಾಜ್ಯ ವಿಧಾನ ಮಂಡಲಕ್ಕೆ ಇರುವ ಕಾನೂನು ರೂಪಿಸುವ ಅಧಿಕಾರಕ್ಕೆ ಬದಲಾಗಿ ಅಧ್ಯಾದೇಶವನ್ನು ಹೊರಡಿಸುವುದು.

ರಾಜ್ಯ ವಿಧಾನ ಮಂಡಲಕ್ಕೆ ಇರುವ ಕಾನೂನು ರೂಪಿಸುವ ಅಧಿಕಾರಕ್ಕೆ ಕೆಳಕಂಡ ಅಧಿಕಾರವನ್ನು ಚಲಾಯಿಸುವಂತಿಲ್ಲ.

94. ಭಾರತೀಯ ಸಂವಿಧಾನದ 72ನೇ ಅನುಚ್ಛೇದದ ಅನ್ವಯ, ರಾಷ್ಟ್ರಪತಿಯವರು ಕೆಳಕಂಡ ಅಧಿಕಾರವನ್ನು ಚಲಾಯಿಸುವಂತಿಲ್ಲ.

1) ಕ್ಷಮಾದಾನ ನೀಡಿಕೆ 2) ಪ್ರವಿಲಂಬನ ನೀಡಿಕೆ 3) ಮಾಫಿ ನೀಡಿಕೆ 4) ಖುಲಾಸೆ ನೀಡಿಕೆ

95. ಅತ್ಯಾಚಾರ ಹಾಗೂ ಕೊಲೆಯ ಅಪರಾಧಕ್ಕಾಗಿ ಜೈಲಿನಲ್ಲಿರಿಸಲಾದ ವ್ಯಕ್ತಿಯು

1) ನ್ಯಾಯಿಕ ಅಭಿರಕ್ಷೆಯಲ್ಲಿಡುವಂತೆ ಒತ್ತಾಯಿಸುವ ಹಾಗಿಲ್ಲ.

2) ಗಣ್ಯ ವ್ಯಕ್ತಿಯಂತೆ ನೋಡಿಕೊಳ್ಳಬೇಕೆಂದು ಒತ್ತಾಯಿಸುವಂತಿಲ್ಲ

3) ಸಂವಿಧಾನದ 21ನೇ ಅನುಚ್ಛೇದದಲ್ಲಿರುವ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು.

4) ತ್ವರಿತ ವಿಚಾರಣೆ ನಡೆಸುವಂತೆ ಒತ್ತಾಯಿಸುವ ಹಾಗಿಲ್ಲ.

96. ಲೋಕಸಭೆ ಹಾಗೂ ರಾಜ್ಯಗಳ ವಿಧಾನಸಭೆ-ಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸ್ಥಾನಗಳ ಮೀಸಲಾತಿಗೆ ಸಂಬಧಿಸಿದಂತೆ ಸಂವಿಧಾನದಲ್ಲಿ ಒದಗಿಸಲಾದ ಅವಕಾಶಗಳು ಈ ಕಳಕಂಡ ಅವಧಿ ಮುಗಿದ ನಂತರ ನಿಂತು ಹೋಗುತ್ತದೆ.

(1) 60 ವರ್ಷಗಳು (2) 70 ವರ್ಷಗಳು (3) 40 ವರ್ಷಗಳು (4) 50 ವರ್ಷಗಳು

97. ಪ್ರತಿಪಾದನೆ(A): ಕೇಂದ್ರದ ನಾಗರಿಕ ಸೇವೆಗಳ ಒಬ್ಬ ಸದಸ್ಯನು ಇಲಾಖೆಯ ಹಣವನ್ನು ದುರುಪಯೋಗ ಮಾಡಿಕೊಂಡಿದ್ದಕ್ಕಾಗಿ ನ್ಯಾಯಾಲಯದಿಂದ ತಪ್ಪಿತಸ್ಥನೆಂದು ನಿರ್ಣಯಿತನಾಗುತ್ತಾನೆ. ಹೀಗಾಗಿ ಆತನನ್ನು ಸೇವೆಯಿಂದ ವಜಾ ಮಾಡಲಾಗುತ್ತದೆ.

ಕಾರಣ (R) : ಯಾವುದೇ ವ್ಯಕ್ತಿಯ ವಿರುದ್ಧ ಏನಾದರೂ ಆರೋಪಗಳನ್ನು ಮಾಡಿದ್ದಾಗ ಅದಕ್ಕೆ ಸಂಬಂಧಿಸಿದಂತೆ ಆತನ ಅಹವಾಲುಗಳನ್ನು ಹೇಳಿಕೊಳ್ಳಲು ಆತನಿಗೆ ಸೂಕ್ತ ಅವಕಾಶ ಕೊಡದ ಹೊರತು ಆತನನ್ನು ವಜಾ ಮಾಡುವಂತಿಲ್ಲ

ಕೆಳಗೆ ಕೊಟ್ಟಿರುವ ಸಂಕೇತಗಳನ್ನು ಬಳಸಿ ನಿಮ್ಮ ಉತ್ತರಗಳನ್ನು ಗುರುತು ಮಾಡಿ.

(1) A ಮತ್ತು R ಎರಡು ಸರಿ. A ಗೆ R ಸರಿಯಾದ ವಿವರಣೆ (2) A ಮತ್ತು R ಎರಡು ಸರಿ. ಆದರೆ A ಗೆ R ಸರಿಯಾದ ವಿವರಣೆಯಲ್ಲ.

(3) A ಸರಿಯಾಗಿದೆ. R ತಪ್ಪು (4) A ತಪ್ಪಾಗಿದೆ. R ಸರಿ ಇದೆ.

98. ಪಟ್ಟಿ I ನ್ನು ಪಟ್ಟಿ II ರೊಂದಿಗೆ ಹೊಂದಿಸಿ. ಪಟ್ಟಿಗಳ ಕೆಳಗೆ ಕೊಟ್ಟಿರುವ ಸಂಕೇತಗಳನ್ನು ಬಳಸಿ ನಿಮ್ಮ ಉತ್ತರವನ್ನು ಗುರುತು ಮಾಡಿ.

| ಪಟ್ಟಿ I | | ಪಟ್ಟಿ II | |
|---|---|---|---|
| A. | Quo warranto | 1. | ಅಧಿಕಾರವನ್ನು ಮೀರದಂತೆ ಅಧೀನ ನ್ಯಾಯಲಯವನ್ನು ತಡೆಯುವುದು |
| B. | Certiorari | 2. | ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸುವಂತೆ ನೀಡಿದ ನಿರ್ದೇಶನ |
| C. | Prohibition | 3. | ಸಾರ್ವಜನಿಕ ಕರ್ತವ್ಯವನ್ನು ಮಾಡುವಂತೆ ಸಾರ್ವಜನಿಕ ಪ್ರಾಧಿಕಾರಕ್ಕೆ ನೀಡಲಾದ ನಿರ್ದೇಶನ |
| D. | Habeas corpus | 4. | ಒಂದು ಹುದ್ದೆಯನ್ನು ಹೊಂದಿರುವ ವ್ಯಕ್ತಿಯ ಅಧಿಕಾರವನ್ನು ಪ್ರಶ್ನಿಸುವುದು |
| | | 5. | ಮಿತಿಮೀರಿದ ಅಧಿಕಾರ ವ್ಯಾಪ್ತಿಯ ಸಂದರ್ಭದಲ್ಲಿ ಅಧಿಕಾರದ ವ್ಯಾಪ್ತಿಯ ರಿಟ್ |

ಕೋಡ್:

| | A | B | C | D | | A | B | C | D |
|---|---|---|---|---|---|---|---|---|---|
| (1) | 1 | 2 | 3 | 4 | (2) | 2 | 3 | 4 | 5 |
| (3) | 4 | 5 | 1 | 2 | (4) | 3 | 5 | 4 | 1 |

99. ಈ ಕೆಳಕಂಡ ಸಂದರ್ಭದಲ್ಲಿ ರಾಷ್ಟ್ರಪತಿಯವರು ತುರ್ತು ಪರಿಸ್ಥಿತಿಯ ಘೋಷನೆಯನ್ನು ಹೊರಡಿಸಬಹುದು.

1. ಯುದ್ಧದಿಂದ ಭಾರತದ ಭದ್ರತೆಗೆ ಅಪಾಯವಿದೆ ಎಂದು ರಾಷ್ಟಪತಿಯವರಿಗೆ ಮನವರಿಕೆಯಾಗಿದ್ದಾಗ
2. ಸಂಸತ್ತಿನ ಎರಡು ಸದನಗಳು ಅಧಿವೇಶನದಲ್ಲಿ ಇಲ್ಲದಿರುವಾಗ
3. ಇಂತಹ ಘೋಷಣೆಯನ್ನು ಮಾಡಬಹುದು ಎಂಬ ಕೇಂದ್ರ ಸಂಪುಟದ ನಿರ್ಣಯವು ಲಿಖಿತ ರೂಪದಲ್ಲಿ ರಾಷ್ಟಪತಿಯವರಿಗೆ ಸಲ್ಲಿಕೆಯಾದ್ದಾಗ
4. ಯುದ್ಧವು ವಾಸ್ತವವಾಗಿ ಸಂಭವಿಸುವುದಕ್ಕೆ ಮೊದಲೇ ತುರ್ತು ಪರಿಸ್ಥಿತಿಯ ಘೋಷನೇಯನ್ನು ಹೊರಡಿಸಬಹುದು
5. ಹೊರಡಿಸಲಾದ ಘೋಷಣೆಗೆ ಸಮ್ಮತಿ ಇಲ್ಲದ ನಿರ್ಣಯವನ್ನು ಲೋಕಸಭೆಯು ಜಾರಿಗೊಳಿಸಿದ್ದರೂ ಸಹ ಆ ಘೋಷಣೆಯನ್ನು ಹಿಂದಕ್ಕೆ ತೆಗೆದುಕೊಳ್ಳವಂತಿಲ್ಲ

ಕೆಳಗಿನ ಸಂಕೇತಗಳನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) 1, 2, 3 ನೇ ವಿವರಣೆಗಳು ಸರಿಯಾಗಿವೆ. (2) 1, 3, 4 ನೇ ವಿವರಣೆಗಳು ಸರಿಯಾಗಿವೆ.

(3) 2, 3, 5 ನೇ ವಿವರಣೆಗಳು ಸರಿಯಾಗಿವೆ (4) 3, 4, 5 ನೇ ವಿವರಣೆಗಳು ಸರಿಯಾಗಿವೆ.

100. 1976 ರಲ್ಲಿ ಮಾಡಲಾದ ನಲವತೆರಡನೇ ತಿದ್ದುಪಡಿಯು ಭಾರತದ ಸಂವಿಧಾನಕ್ಕೆ ಈ ಕೆಳಕಂಡ ಪದಗಳನ್ನು ಸೇರಿದಿತು.

(1) ಸಮಾಜವಾದಿ ಹಾಗೂ ಜಾತ್ಯಾತೀತ (2) ಜಾತ್ಯಾತೀತ ಹಾಗೂ ಪ್ರಜಾಸತ್ತಾತ್ಮಕ

(3) ಸೌರ್ವಭೌಮ ಹಾಗೂ ಗಣರಾಜ್ಯ (4) ಸೌರ್ವಭೌಮ ಹಾಗೂ ಜಾತ್ಯಾತೀತ

---

93) 4 94) 4 95) 3 96) 2 97) 1 98) 3 99) 2 100) 1

Scanned by CamScanner